MVC No.169/2022
PW-1

**ದಿನಾಂಕ: 16-07-2025.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲು: ದಾರ ಪರ ಶ್ರೀ SND ಮಾನ್ಯ ವಕೀಲರಿಂದ 1 ನೇ ಎದುರುದಾರರ ಪರವಾಗಿ:**

ಸದರಿ ಅಪಘಾತದ ದಿನದಂದು ಸದರಿ ಆಟೋದಲ್ಲಿ ಸುಮಾರು 8-10 ಜನ ಪ್ರಯಾಣಿಸುತ್ತಿದ್ದರು. ಸದರಿ ಆಟೋದಲ್ಲಿ ಯಾರು ಯಾರು ಎಲ್ಲೆಲ್ಲಿ ಕುಳಿತುಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ ಆದರೆ ನನ್ನ ತಾಯಿ ಸದರಿ ಆಟೋದಲ್ಲಿ ಪ್ರಯಾಣಿಸುತ್ತಿದ್ದರು. ಸದರಿ ಆಟೋದಲ್ಲಿ ಸುಮೂರು 10-15 ಜನ ಪ್ರಯಾಣಿಸುತ್ತಿದ್ದರಿಂದ ಅದರ ನಿಯಂತ್ರಣ ತಪ್ಪಿದ್ದರಿಂದ ಸದರಿ ಅಪಘಾತವು ಸದರಿ ಆಟೋ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಟ್ಯಾಂಕರ ನ ವಿಮೆ ಹಾಗೂ ಅದರ ಚಾಲಕನ DL ಚಾಲ್ತಿಯಲ್ಲಿ ಇದ್ದಿದ್ದರಿಂದ ಪರಿಹಾರದ ಹಣವನ್ನು ಕೇಳಲು ಸದರಿ ಟ್ಯಾಂಕರನ್ನು ಸುಳ್ಳಾಗಿ ಪ್ರಸ್ತುತ ಪ್ರಕರಣದಲ್ಲಿ ಅಳವಡಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಪಾಟಿ ಸವಾಲು: ಶ್ರೀ RND ಮಾನ್ಯ ವಕೀಲರಿಂದ 2 ನೇ ಎದುರುದಾರರ ಪರವಾಗಿ:**

2. ಮೃತ ಉಮಾದೇವಿ ಇವರು ನನ್ನ ತಾಯಿ. ನನ್ನ ತಾಯಿಗೆ ನಾನು ಒಬ್ಬಳೇ ಮಗಳು. ಸದರಿ ಆಟೋದಲ್ಲಿ ಸದರಿ ದಿನದಂದು ಸುಮಾರು 8-10 ಜನ ಪ್ರಯಾಣಿಸುತ್ತಿದ್ದರು. ಸದರಿ ಆಟೋದಲ್ಲಿ ಕೇವಲ ಮೂರು ಜನ ಪ್ರಯಾಣಿಸುಂತಹದ್ದು ಆಗಿರುತ್ತದೆ ಎಂದರೆ ಸರಿ. ಸದರಿ ಆಟೋ ಮಾಲಿಕರು ಸದರಿ ಆಟೋಗೆ ಮೂರು ಜನ ಕುಳಿತುಕೊಂಡು ಪ್ರಯಾಣಸುವಂತೆ ಸರ್ಕಾರದಿಂದ ಪರವಾಣಿಗೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಿನದಂದು ಸದರಿ ಆಟೋವನ್ನು ಶ್ರೀ ಮಲ್ಲಿಕಾರ್ಜುನ ಎನ್ನುವವರು ಓಡಿಸುತ್ತಿದ್ದರು. ಸದರಿ ಮಲ್ಲಿಕಾರ್ಜುನ ಇವರು ರಸ್ತಾಪೂರ ಗ್ರಾಮಾದವಾಗಿದ್ದು ನನಗೆ ಅವರ ಪರಿಚಯ ಇರುತ್ತದೆ. ನನಗೆ ಸದರಿ ಆಟೋದ ಮಾಲಿಕರ ಪರಿಚಯವಿದ್ದು ಅವರೂ ಕೂಡಾ ರಸ್ತಾಪೂರ ಗ್ರಾಮದವಾಗಿರುತ್ತಾರೆ. ಸದರಿ ಆಟೋದ ಚಾಲಕ ಮಲ್ಲಿಕಾರ್ಜುನ ಇವರು DL ಹೊಂದಿರಲಿಲ್ಲ ಎಂದರೆ ಸರಿ. ಆದ್ದರಿಂದ ಸದರಿ ಮಲ್ಲಿಕಾರ್ಜುನ ಇವರ ಮೇಲೆ ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಆಟೋ ಮಾಲಿಕರು ಸದರಿ ಆಟೊಗೆ ವಿಮೆಯನ್ನು

ಮಾಡಿಸಿರುವುದಿಲ್ಲ ಎಂದರೆ ಸರಿ. ಆದ್ದರಿಂದ ಪೊಲೀಸರು ಸದರಿ ಆಟೋದ ಚಾಲಕ ಮಲ್ಲಿಕಾರ್ಜುನ ಹಾಗೂ ಅದರ ಮಾಲಿಕರ ಮೇಲೆ ಅಂತಿಮ ವರದಿಯನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಪ್ರಸ್ತುತ ಪ್ರಕರಣದಲ್ಲಿ ಸದರಿ ಆಟೋದ ಮಾಲಿಕ ಹಾಗೂ ವಿಮಾ ಕಂಪನಿಯನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತ ಯಾವ ರೀತಿ ಆಗಿರುತ್ತದೆ ಎಂದು ನನಗೆ ವಯಕ್ತಿಯಕವಾಗಿ ಗೊತ್ತಿರುವುದ್ದಿಲ ಎಂದರೆ ಸರಿ. ನನಗೆ ಕೊಳ್ಳೂರು ಗ್ರಾಮದವರು ನನಗೆ ಸದರಿ ಅಪಘಾತದ ಬಗೆ ಹೇಳಿರುತ್ತಾರೆ.

3. ಸದರಿ ಅಪಘಾತವಾದ ರಸ್ತೆ ಸುಮಾರು 60 ಅಡಿ ಅಗಲವಿರುತ್ತದೆ ಎಂದರೆ ಸರಿ. ಸದರಿ ರಸ್ತೆಯು ಪೂರ್ವ-ಪಶ್ಚಿಮವಾಗಿರುತ್ತದೆ ಎಂದರೆ ಸರಿ. ಸದರಿ ದಿನದಂದು ಸದರಿ ಆಟೋ ದೇವದುರ್ಗದ ಕಡೆಗೆ ಹೋಗುತ್ತಿತ್ತು. ಸದರಿ ರಸ್ತೆ 60 ಅಡಿ ಅಗಲವಿರುವುದರಿಂದ ಎರಡೂ ಕಡೆಯಿಂದ ವಾಹನಗಳು ಸಲೀಸಾಗಿ ಹೋಗುತ್ತವೆ ಎಂದರೆ ಸರಿ. ಸದರಿ ದಿನದಂದು ಸದರಿ ಆಟೋ ಚಾಲಕನ ಹತ್ತಿರ 1 ಅಥವಾ ಇಬ್ಬರೂ ಜನರು ಕುಳಿತುಕೊಂಡಿಬಹುದು. ನನಗೆ ಸದರಿ ಅಪಘಾತದ ಮಾಹಿತಿಯನ್ನು ಕೊಟ್ಟಿರುವ ವ್ಯಕ್ತಿಯ ಹೆಸರು ಗೊತ್ತಿರುವುದಿಲ್ಲ.

4. ಸದರಿ ಆಟೋದಲ್ಲಿ ಮೂರೇ ಜನ ಕುಳಿತುಕೊಳ್ಳದೇ 9 ಜನ ಪ್ರಯಾಣಿಸುತ್ತಿದ್ದರಿಂದ ಅದರ ನಿಯಂತ್ರಣ ತಪ್ಪಿ ಪಲ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತವಾಗುವಲ್ಲಿ ಸದರಿ ಟ್ಯಾಂಕರನ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಟೋದ ಚಾಲಕನು DL ಹಾಗೂ ಅದರ policy ಇರದ ಕಾರಣ ಉದ್ದೇಶ ಪೂರ್ವಕವಾಗಿ ಟ್ಯಾಂಕರನ್ನು ಪೊಲಿಸರೊಂದಿಗೆ ಶಾಮಿಲಾಗಿ ಸುಳ್ಳಾಗಿ ಸದರಿ ಟ್ಯಾಂಕರ ಚಾಲಕನ ಮೇಲೆ ಸುಳ್ಳಾದ ಅಂತಿಮ ವರದಿಯನ್ನು ಸಲ್ಲಿಸುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸದರಿ ತಾಯಿ ತೀರಿಕೂಳ್ಳುವಲ್ಲಿ ಸದರಿ ಟ್ಯಾಂಕರ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ದೇಹದ ಮರಣೋತ್ತರ ಪರೀಕ್ಷೆಯನ್ನು ಮಾಡುವಾಗ ಅವರ ವಯಸ್ಸನ್ನು ವೈದ್ಯರಿಗೆ ನಾನೇ ಹೇಳಿರುತ್ತೇನೆ ಎಂದರೆ ಸರಿ.

5. 2021 ರಲ್ಲಿ ನನ್ನ ತಾಯಿಗೆ 40 ವರ್ಷ ವಯಸ್ಸಿದ್ದು ಅವರು ಪ್ರತಿ ತಿಂಗಳು ರೂ.20,000/- ಆದಾಯವನ್ನು ಹೊಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಸದರಿ ಟ್ಯಾಂಕರ ಚಾಲಕನ DL ಹಾಗೂ ಸದರಿ ವಾಹನದ RC ಹಾಗೂ permit ನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. 1 ನೇ ಎದುರುದಾರರು ವಿಮೆ ಪಾಲಿಸಿಗಳನ್ನು ಉಲ್ಲಂಘನೆ ಮಾಡಿದ್ದರಿಂದ 2 ನೇ ಎದುರುದಾರರು ನಮಗೆ ಪರಿಹಾರದ ಹಣವನ್ನು ಕೊಡುವ ಭಾದ್ಯತೆಯನ್ನು ಹೊಂದಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.